# ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಧ್ಯಮಾವಧಿ ಆರ್ಥಿಕ ಯೋಜನೆ
4. ಹಣಕಾಸು ನಿರ್ವಹಣಾ ತತ್ವಗಳು
5. ಆರ್ಥಿಕ ಪಾರದರ್ಶಕತೆಗಾಗಿ ಕ್ರಮಗಳು
6. ಈ ಅಧಿನಿಯಮದ ಪಾಲನೆಯನ್ನು ಜಾರಿಗೊಳಿಸುವುದಕ್ಕೆ ಕ್ರಮಗಳು
7. ಹಣಕಾಸು ಲೆಕ್ಕ ಮತ್ತು ವಾರ್ಷಿಕ ವರದಿಯ ಪ್ರಕಟಣೆ
8. ನಿಯಮಗಳ ರಚನಾಧಿಕಾರ
9. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
10. ಇತರ ಕಾನೂನುಗಳ ಅನ್ವಯ
11. ತೊಂದರೆಗಳ ನಿವಾರಣೆಗೆ ಅಧಿಕಾರ


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯ ಸರ್ಕಾರದ ಬಜೆಟ್ ತಯಾರಿಕೆ, ಲೆಕ್ಕ ಇಡುವಿಕೆ ಮತ್ತು ಲೆಕ್ಕಪರಿಶೋಧನೆ ಕುರಿತ ಕಾರ್ಯ ಚೌಕಟ್ಟನ್ನು ಭಾರತ ಸಂವಿಧಾನದ 283ನೇ ಅನುಚ್ಛೇದದ ಅಡಿಯಲ್ಲಿ ಸರ್ಕಾರವು ರೂಪಿಸಿದ ವಿವಿಧ ಸಂಹಿತೆಗಳು ಮತ್ತು ಕೈಪಿಡಿಗಳಲ್ಲಿ, ವಿಶೇಷವಾಗಿ ಉಪಬಂಧಿಸಲಾಗಿದೆ. ರಾಜ್ಯದ ಬಜೆಟನ್ನು ಸರ್ಕಾರವು ಸಿದ್ಧಪಡಿಸಿ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಒಪ್ಪಿಗೆಗಾಗಿ ಮಂಡಿಸುತ್ತದೆ. ಭಾರತ ಸಂವಿಧಾನದಲ್ಲಿ ಹೇಳಿರುವಂತೆ ವಿಧಾನ ಮಂಡಲದ ಉಭಯ ಸದನಗಳು ಬಜೆಟ್ ಅನ್ನು ಒಮ್ಮೆ ಅಂಗೀಕರಿಸಿದ ತರುವಾಯ, ವಿಧಾನ ಮಂಡಲವು ವಿಧ್ಯುಕ್ತವಾಗಿ ಅಂಗೀಕರಿಸಿದ ಬಜೆಟ್‌ಗೆ ಅನುಸಾರವಾಗಿ ವೆಚ್ಚವನ್ನು ಸಂಚಿತ ನಿಧಿಯಿಂದ ಭರಿಸಲಾಗುವುದು. ವಿಧಾನ ಮಂಡಲವು ಪುರಸ್ಕರಿಸಿದ ಬಜೆಟ್ ಏರ್ಪಾಡುಗಳಿಂದ ಬದಲಾವಣೆಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ವಿವರಿಸಿರುವಂತೆ ಮಾತ್ರವೇ ಮಾಡಬಹುದು ಮತ್ತು ಸೂಕ್ತ ಸಮಯದಲ್ಲಿ ಅದನ್ನು ವಿಧಾನ ಮಂಡಲದ ಗಮನಕ್ಕೆ ತರಲಾಗುವುದು.

ರಾಜ್ಯ ಸರ್ಕಾರಕ್ಕಾಗಿ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ನಿರ್ವಹಣೆ ಪ್ರಕಾರ್ಯಗಳನ್ನು ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೆರವೇರಿಸುತ್ತಾರೆ. ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ. ಅವರು ರಾಜ್ಯ ವಿಧಾನ ಮಂಡಲ ಮುಂದೆ ಅದನ್ನು ಮಂಡಿಸುವಂತೆ ವ್ಯವಸ್ಥೆ ಮಾಡುತ್ತಾರೆ. ಈ ವರದಿಗಳನ್ನು, ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಕಳುಹಿಸಲಾಗುತ್ತದೆ ಹಾಗೂ ಆ ಸಮಿತಿಯ ವರದಿಯನ್ನು ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯೊಡನೆ ಸದನದ ಮುಂದೆ ಮಂಡಿಸಲಾಗುತ್ತದೆ.

ಇಂಥ ಕಾರ್ಯಚೌಕಟ್ಟು ಇರುವಾಗ ರಾಜ್ಯ ಸರ್ಕಾರವು, ಆರ್ಥಿಕ ಸ್ಥಿರತೆ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಕಾಪಾಡಿಕೊಂಡುಬರಲು ನಿಯಮಿಸಲಾದ ಗಣನಾಂಶಗಳಿಗೆ ಗುರಿಗಳನ್ನು ನಿರ್ದಿಷ್ಟಪಡಿಸಿ ನಾಲ್ಕು ವರ್ಷಗಳ ಒಂದು ಆವರ್ತಕ ದಾಖಲೆಯಾಗಿರುವ, ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು (ಮ.ಆ.ಯೋ) ರಾಜ್ಯ ಸರ್ಕಾರವು ಸಿದ್ಧಪಡಿಸಬೇಕೆಂದು ಕಡ್ಡಾಯಗೊಳಿಸುವುದಕ್ಕಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ನ್ನು ಜಾರಿಗೆ ತಂದಿದೆ. ಆ ಅಧಿನಿಯಮವು, ರಾಜ್ಯ ಸರ್ಕಾರವು ಅನುಸರಿಸಬೇಕಾದ ಆರ್ಥಿಕ ನಿರ್ವಹಣಾ ತತ್ವಗಳನ್ನು ಸಹ ನಿರ್ದಿಷ್ಟಪಡಿಸುತ್ತದೆ. ಮಧ್ಯಮಾವಧಿ ಆರ್ಥಿಕ ಯೋಜನೆಯ ಮುನ್ನಡೆಯಾಗಿ,

ರಾಜ್ಯ ಸರ್ಕಾರವು, ಇಲಾಖಾವಾರು ಆಧಾರದ ಮೇಲೆ ಮ.ಆ.ಯೋ. ವನ್ನು ಸಿದ್ಧಪಡಿಸುವುದನ್ನು ಕೈಬಿಟ್ಟು ಇಡೀ ರಾಜ್ಯಕ್ಕೆ ಒಂದು ಮ.ಆ.ಯೋ ಜೊತೆಗೆ ಪ್ರತಿಯೊಂದು ಇಲಾಖೆಗೂ ಇಲಾಖಾ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ಸಿದ್ಧಪಡಿಸಲು ನಿರ್ಧರಿಸಿದೆ.

ಸ್ಥಳೀಯ ನಿಧಿ ಪ್ರಾಧಿಕಾರಗಳಿಗೂ (ಸ.ನಿ.ಪ್ರಾ) ಬಜೆಟ್ ತಯಾರಿಕೆ, ಲೆಕ್ಕ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆಗಾಗಿ ಅದೇ ರೀತಿಯ ಒಂದು ಚೌಕಟ್ಟು ಇರಬೇಕೆಂದು ಅಭಿಪ್ರಾಯಪಡಲಾಗಿದೆ. ಆದ್ದರಿಂದ ಈ ಮುಂದಿನ ಅಂಶಗಳಿಗಾಗಿ ಉಪಬಂಧ ಕಲ್ಪಿಸುವುದು ಅಗತ್ಯವಿದೆ.

1. ಸ್ಥಳೀಯ ನಿಧಿ ಪ್ರಾಧಿಕಾರಗಳಿಗಾಗಿ ಒಂದು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ಕಡ್ಡಾಯಪಡಿಸುವುದು.
2. ಹಣಕಾಸು ನಿರ್ವಹಣೆ ತತ್ವಗಳನ್ನು ನಿಗದಿಪಡಿಸುವುದು.
3. ಸ್ಥಳೀಯ ಮಟ್ಟದಲ್ಲಿ ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು.
4. ಲೆಕ್ಕಪತ್ರಗಳ ತಯಾರಿಕೆ, ಸಲ್ಲಿಸುವಿಕೆ ಮತ್ತು ಪರಿಶೀಲನೆಗೆ ಸೂಕ್ತ ಕಾರ್ಯವಿಧಾನ ಇರುವಂತೆ ನೋಡಿಕೊಳ್ಳುವುದು.
5. ಸೂಕ್ತ ಪರಿಶೀಲನೆ ಮಾಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಚಾಚೂ ತಪ್ಪದೆ ಪಾಲಿಸುವಂತೆ ನೋಡಿಕೊಳ್ಳುವುದು.
6. ಅಧಿನಿಯಮದ ಉಪಬಂಧಗಳ ಕಡ್ಡಾಯ ಪಾಲನೆಗೆ ಕಾರ್ಯಕ್ರಮಗಳನ್ನು ನಿಗದಿಪಡಿಸುವುದು.

ಆದ್ದರಿಂದ ಈ ವಿಧೇಯಕ.

[2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 22]

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 5 ಮತ್ತು 32ನೇ ನಮೂದುಗಳು)

# 2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 41

*(2003 ರ ಸೆಪ್ಟೆಂಬರ್ 6 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003

*(2003 ರ ಸೆಪ್ಟೆಂಬರ್ 5 ನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಸ್ಥಳೀಯ ನಿಧಿಗಳ ಸಾರ್ವಜನಿಕ ಆರ್ಥಿಕ ಕಾರ್ಯಾಚರಣೆಗಳನ್ನು ವಿವೇಚನೆಯಿಂದ ನಿರ್ವಹಿಸುವಂತೆ ಮತ್ತು ಮಧ್ಯಮಾವಧಿ ಆರ್ಥಿಕ ರೂಪರೇಷೆಗಳನ್ನು ಬಳಸಿಕೊಳ್ಳುವಂತೆ ನೋಡಿಕೊಂಡು ರಾಜಸ್ವದಲ್ಲಿ ಸಾಕಷ್ಟು ಹೆಚ್ಚಳವನ್ನು ಸಾಧಿಸುವ ಮೂಲಕ, ಸಾಮಾಜಿಕ ಮತ್ತು ಭೌತಿಕ ಮೂಲ ಸೌಲಭ್ಯಗಳನ್ನು ಹಾಗೂ ಮಾನವ ಅಭಿವೃದ್ಧಿಯನ್ನು ಹೆಚ್ಚಿಸುವ ಅವಕಾಶಗಳನ್ನು ವಿಸ್ತರಿಸುವುದಕ್ಕಾಗಿ ಸ್ಥಳೀಯ ನಿಧಿಗಳ ಅತ್ಯುತ್ತಮ ಆರ್ಥಿಕ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸ್ಥಳೀಯ ನಿಧಿ ಪ್ರಾಧಿಕಾರಗಳ ಹೊಣೆಗಾರಿಕೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಆರ್ಥಿಕ ಸ್ಥಿರತೆಯನ್ನು ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಖಚಿತಪಡಿಸಲು ಹಾಗೂ ರಾಜಸ್ವದಲ್ಲಿ ಸಾಕಷ್ಟು ಹೆಚ್ಚಳ, ಹೆಚ್ಚಿನ ಕಾರ್ಯನಿರ್ವಹಣೆ, ನಾಗರಿಕರ ಪಾಲ್ಗೊಳ್ಳುವಿಕೆ ಮತ್ತು ಪಾರದರ್ಶಕತೆಗಳನ್ನು ಸಾಧಿಸಿ, ಆರ್ಥಿಕ ನೀತಿಯ ಪರಿಣಾಮಕಾರಿ ಅನುಸರಣೆಗೆ ಇರುವ ಅಡೆತಡೆಗಳನ್ನು ನಿವಾರಿಸಿ, ಸಾಮಾಜಿಕ ಮತ್ತು ಭೌತಿಕ ಮೂಲಸೌಲಭ್ಯಗಳು ಹಾಗೂ ಮಾನವ ಅಭಿವೃದ್ಧಿಯ ಸುಧಾರಣೆಗೆ ಅವಕಾಶಗಳನ್ನು ಹೆಚ್ಚಿಸಲು ಹಾಗೂ ಸೂಕ್ತ ಆಧುನಿಕ ವ್ಯವಸ್ಥೆಗಳ ಮೂಲಕ ಹಾಗೂ ಮಧ್ಯಮಾವಧಿ ಆರ್ಥಿಕ ರೂಪರೇಷೆಗಳನ್ನು ಬಳಸಿಕೊಂಡು ಸ್ಥಳೀಯ ನಿಧಿಗಳ ಆರ್ಥಿಕ ಕಾರ್ಯಾಚರಣೆಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಸಾಧಿಸುವ ಮೂಲಕ ವಿವೇಚನಾಯುಕ್ತ ಹಣಕಾಸು ನಿರ್ವಹಣೆ ಸಾಧ್ಯಗೊಳಿಸಲು ಸ್ಥಳೀಯ ನಿಧಿ ಪ್ರಾಧಿಕಾರಗಳ ಹೊಣೆಗಾರಿಕೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಕಾಲಕಾಲಕ್ಕೆ, ಅಧಿಸೂಚಿಸಬಹುದಾದಂಥ ಸ್ಥಳೀಯ ನಿಧಿ ಪ್ರಾಧಿಕಾರಗಳಿಗೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ, ದಿನಾಂಕದಂದು ಜಾರಿಗೆ ಬರತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ಪತ್ರಿಕೆ ಸಂಖ್ಯೆ: 1064 ದಿನಾಂಕ: 6.9.2003 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 49 ಶಾಸನ 2003

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸ್ಥಳೀಯ ನಿಧಿ" ಎಂದರೆ, ನಿಕಾಯಗಳ ಎಲ್ಲ ವ್ಯವಹರಣೆಗಳು ಅಥವಾ ಬಜೆಟ್ ಮಂಜೂರಾತಿ ನೀಡುವ, ಹುದ್ದೆಯ ಸೃಜನೆಗೆ ಅಥವಾ ಭರ್ತಿ ಮಾಡುವುದಕ್ಕೆ ಅಥವಾ ನಿರ್ದಿಷ್ಟ ನೇಮಕಗಳಿಗೆ ಅಥವಾ ರಜೆಯ ನಗದು ಪರಿವರ್ತನೆ, ನಿವೃತ್ತಿ

ವೇತನ ಅಥವಾ ಅಂತಹವೇ ವಿಷಯಗಳಿಗೆ ಮಂಜೂರಾತಿ ನೀಡುವ ನಿರ್ದಿಷ್ಟ ವಿಷಯಗಳಿಗೆ ಸಂಬಂಧಪಟ್ಟಂತೆ, ಯಾವುದೇ ಕಾನೂನಿನ ಮೂಲಕ ಅಥವಾ ಕಾನೂನಿನ ಬಲ ಇರುವ ನಿಯಮದ ಮೂಲಕ, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಸ್ಥಳೀಯ ನಿಕಾಯಗಳ ಆಡಳಿತ ನಿರ್ವಹಣೆಗೆ ಒಳಪಟ್ಟಿರುವ ರಾಜಸ್ವ;

(ಬಿ) "ಸ್ಥಳೀಯ ನಿಧಿ ಪ್ರಾಧಿಕಾರ" ಎಂದರೆ, ಸ್ಥಳೀಯ ನಿಧಿಯ ಆಡಳಿತ ನಿರ್ವಹಿಸುವ ಯಾವುದೇ ನಿಕಾಯ;

(ಸಿ) "ಲೆಕ್ಕ ನಿರ್ವಹಣೆ ಗುಣಮಟ್ಟ" ಎಂದರೆ, ಸ್ಥಳೀಯ ನಿಧಿ ಪ್ರಾಧಿಕಾರಗಳ ಸಂಬಂಧದಲ್ಲಿ ನಿಯಮಿಸಬಹುದಾದಂತಹ ಲೆಕ್ಕ ನಿರ್ವಹಣೆ ಗುಣಮಟ್ಟ;

(ಡಿ) "ವಾರ್ಷಿಕ ಬಜೆಟ್" ಎಂದರೆ, ಸಂಬಂಧಪಟ್ಟ ಅಧಿನಿಯಮಗಳಿಗೆ ಅಥವಾ ಅವುಗಳ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮುಂದೆ ಮಂಡಿಸಿದ ಬಜೆಟ್;

(ಇ) "ಬಜೆಟ್ ವ್ಯತ್ಯಾಸ" ಎಂದರೆ, ಒಂದು ಆರ್ಥಿಕ ವರ್ಷಕ್ಕಾಗಿನ ಬಜೆಟ್‌ನಲ್ಲಿ ಹೇಳಿದ ಮೊಬಲಗು ಹಾಗೂ ವಾಸ್ತವಿಕ ಮೊಬಲಗಿನ ನಡುವಿನ ವ್ಯತ್ಯಾಸ;

(ಎಫ್) "ನಿಯಂತ್ರಣ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ನಿಯಂತ್ರಣ ಪ್ರಾಧಿಕಾರಿ ಎಂದು ನೇಮಕ ಮಾಡಿದ ಯಾವೊಬ್ಬ ಅಧಿಕಾರಿ ಮತ್ತು ಬೇರೆ ಬೇರೆ ಸ್ಥಳೀಯ ನಿಧಿ ಪ್ರಾಧಿಕಾರಗಳ ಸಂಬಂಧದಲ್ಲಿ ಬೇರೆ ಬೇರೆ ನಿಯಂತ್ರಣ ಪ್ರಾಧಿಕಾರಿಗಳನ್ನು ನೇಮಕಮಾಡಬಹುದು;

(ಜಿ) "ಪ್ರಸಕ್ತ ವರ್ಷ" ಎಂದರೆ, ಯಾವ ವರ್ಷಕ್ಕಾಗಿ ಬಜೆಟ್ ಅನ್ನು ಮತ್ತು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು (ಮ.ಆ.ಯೋ) ಸಲ್ಲಿಸಲಾಗುತ್ತದೆಯೋ ಆ ವರ್ಷದ ಹಿಂದಿನ ವರ್ಷ;

(ಹೆಚ್) "ಆರ್ಥಿಕ ಸೂಚಿಗಳು" ಎಂದರೆ, ಸ್ಥಳೀಯ ನಿಧಿ ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯ ಮೌಲ್ಯಮಾಪನಕ್ಕಾಗಿ, ನಿಯಮಿಸಬಹುದಾದಂಥ ಕ್ರಮಗಳು;

(ಐ) "ಹಿಂದಿನ ವರ್ಷ" ಎಂದರೆ, ಪ್ರಸಕ್ತ ವರ್ಷದ ಹಿಂದಿನ ವರ್ಷ.

**3. ಮಧ್ಯಮಾವಧಿ ಆರ್ಥಿಕ ಯೋಜನೆ.-** (1) ಪ್ರತಿಯೊಂದು ಸ್ಥಳೀಯ ನಿಧಿ ಪ್ರಾಧಿಕಾರದ ಸಂಬಂಧದಲ್ಲಿ ಪ್ರತಿ ಆರ್ಥಿಕ ವರ್ಷದ ವಾರ್ಷಿಕ ಬಜೆಟ್ಟಿನೊಡನೆ ಒಂದು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(2) ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ಆರ್ಥಿಕ ಸೂಚಿಗಳಿಗಾಗಿ ನಾಲ್ಕು ವರ್ಷಗಳ ಆವರ್ತಕ ಗುರಿಯನ್ನು ತಳಹದಿ ಪೂರ್ವ ಭಾವನೆಗಳನ್ನು ನಿರ್ದಿಷ್ಟಪಡಿಸಿ ನಿರೂಪಿಸತಕ್ಕದ್ದು.

(3) ವಿಶೇಷವಾಗಿ ಮತ್ತು (2)ನೇ ಉಪ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಮಧ್ಯಮಾವಧಿ ಆರ್ಥಿಕ ಯೋಜನೆಯು,-

(ಎ) ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚಗಳ ನಡುವಿನ ಸಮತೋಲನಕ್ಕೆ; ಮತ್ತು

(ಬಿ) ಉತ್ಪಾದಕ ಸ್ವತ್ತುಗಳ ಸೃಜನೆಗಾಗಿ ಸಾಲಗಳೂ ಸೇರಿದಂತೆ ಬಂಡವಾಳ ಸ್ವೀಕೃತಿಗಳ ಬಳಕೆಗೆ

- ಸಂಬಂಧಪಡುವ ನಿರ್ವಹಣಾ ಸಾಮರ್ಥ್ಯದ ನಿರ್ಧರಣೆಯನ್ನು ಒಳಗೊಳ್ಳತಕ್ಕದ್ದು.

(4) ಮಧ್ಯಮಾವಧಿ ಆರ್ಥಿಕ ಯೋಜನೆಯು, ಇತರ ವಿಷಯಗಳೊಂದಿಗೆ, ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು,-

(ಎ) ಸ್ಥಳೀಯ ನಿಧಿ ಪ್ರಾಧಿಕಾರದ ಮಧ್ಯಮಾವಧಿ ಆರ್ಥಿಕ ಧ್ಯೇಯಗಳು;

(ಬಿ) ಸ್ಥಳೀಯ ನಿಧಿ ಪ್ರಾಧಿಕಾರದ ಉದ್ದಿಷ್ಟ ಕಾರ್ಯಗಳು, ಧ್ಯೇಯಗಳು ಮತ್ತು ಗುರಿಗಳು;

(ಸಿ) ಈ ಮೊದಲು ವಿಧಿಸಲಾಗಿದ್ದ ಗುರಿಗಳ ಜೊತೆಯಲ್ಲಿ ಹೋಲಿಸಿ ಹಿಂದಿನ ವರ್ಷದಲ್ಲಿ ನಿಯಮಿಸಲಾದ ಆರ್ಥಿಕ ಸೂಚಿಗಳ ಮೌಲ್ಯಮಾಪನ ಮತ್ತು ಪರಿಷ್ಕೃತ ಅಂದಾಜುಗಳಿಗನುಸಾರವಾಗಿ ಪ್ರಸಕ್ತ ವರ್ಷದ ಸಂಭವನೀಯ ನಿರ್ವಹಣೆ;

(ಡಿ) ಸ್ಥಳೀಯ ನಿಧಿ ಪ್ರಾಧಿಕಾರದ ಆರ್ಥಿಕ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುವ ಇತ್ತೀಚಿನ ಅರ್ಥ ವ್ಯವಸ್ಥೆಯ ಪ್ರವೃತ್ತಿಗಳ ಹಾಗೂ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಭಾವಿ ನಿರೀಕ್ಷೆಗಳ ವಿವರಣಪಟ್ಟಿ;

(ಇ) ಮುಂಬರುವ ಹಣಕಾಸು ವರ್ಷಕ್ಕಾಗಿ, ಆರ್ಥಿಕ ಕ್ಷೇತ್ರದಲ್ಲಿ ಸ್ಥಳೀಯ ನಿಧಿ ಪ್ರಾಧಿಕಾರದ ಕಾರ್ಯತಂತ್ರದ ಆದ್ಯತೆಗಳು;

(ಎಫ್) ಮುಂಬರುವ ಹಣಕಾಸು ವರ್ಷಕ್ಕಾಗಿ ಸ್ಥಳೀಯ ನಿಧಿ ಪ್ರಾಧಿಕಾರದ ವೆಚ್ಚ, ಸಾಲಗಳು ಮತ್ತು ಇತರ ದಾಯಿತ್ವಗಳು, ಸಾಲ ನೀಡಿಕೆ ಮತ್ತು ಹಣ ಹೂಡಿಕೆಗಳಿಗೆ ಸಂಬಂಧಪಡುವ ಕಾರ್ಯನೀತಿಗಳು ಮತ್ತು ಬಜೆಟ್ ಮೇಲೆ ಪರಿಣಾಮಬೀರಬಲ್ಲ ಅಂಥ ಎಲ್ಲಾ ಪ್ರಮುಖ ಕಾರ್ಯ ಚಟುವಟಿಕೆಗಳು ಮತ್ತು ಇವುಗಳ ಪೈಕಿ ಪ್ರತಿಯೊಂದಕ್ಕೂ ಸಂಬಂಧಿಸಿದ ಪ್ರಮುಖ ಆರ್ಥಿಕ ಕ್ರಮಗಳು ಮತ್ತು ಗುರಿಗಳು;

(ಜಿ) ಸ್ಥಳೀಯ ನಿಧಿ ಪ್ರಾಧಿಕಾರದ ಪ್ರಸಕ್ತ ಆರ್ಥಿಕ ಕಾರ್ಯನೀತಿಗಳು, 4ನೇ ಪ್ರಕರಣದಲ್ಲಿ ವಿವರಿಸಿದ ಆರ್ಥಿಕ ನಿರ್ವಹಣಾ ತತ್ವಗಳಿಗೆ ಮತ್ತು ಮಧ್ಯಮಾವಧಿ ಆರ್ಥಿಕ ಯೋಜನೆಯಲ್ಲಿ ವಿವರಿಸಿದ ಆರ್ಥಿಕ ಧ್ಯೇಯಗಳಿಗೆ ಎಷ್ಟರ ಮಟ್ಟಿಗೆ ಸುಸಂಗತವಾಗಿವೆ ಎಂಬ ಬಗೆಗಿನ ಮೌಲ್ಯಮಾಪನ;

(ಹೆಚ್) ಭೌತಿಕ ಮತ್ತು ಹಣಕಾಸು ಗುರಿಗಳ ನಡುವೆ ಸ್ಪಷ್ಟ ಸಂಪರ್ಕ;

(ಐ) ಸಾಧ್ಯವಾದಷ್ಟು ಮಟ್ಟಿನ ಪರಿಮಾಣಾತ್ಮಕ ವಿವರಗಳೊಂದಿಗೆ ಪ್ರಮುಖ ನಿರ್ವಹಣಾ ಕ್ಷೇತ್ರಗಳು ಮತ್ತು ಅದಕ್ಕೆ ಸಂವಾದಿ ನಿರ್ವಹಣಾ ಸೂಚಿಗಳು.

(5) ಮಧ್ಯಮಾವಧಿ ಆರ್ಥಿಕ ಯೋಜನೆಯು, ವಾರ್ಷಿಕ ಬಜೆಟ್ಟಿನ ತಯಾರಿಕೆಗಾಗಿ ಆಕರ ದಾಖಲೆಯಾಗಿರತಕ್ಕದ್ದು ಮತ್ತು ನೀರು ಸರಬರಾಜು, ರಸ್ತೆ ನಿರ್ಮಾಣ, ಶಿಕ್ಷಣ, ಸಾರ್ವಜನಿಕ ಆರೋಗ್ಯ, ಘನ ತ್ಯಾಜ್ಯ ನಿರ್ವಹಣೆ ಮತ್ತು ಅಂತಹವೇ ಕಾರ್ಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಸ್ಥಳೀಯ ನಿಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ನಾಗರಿಕರ ಪ್ರಮುಖ ಅವಶ್ಯಕತೆಗಳನ್ನು ಪೂರೈಸತಕ್ಕದ್ದು.

(6) ಮಧ್ಯಮಾವಧಿ ಆರ್ಥಿಕ ಯೋಜನೆಯು, ಕಾರ್ಯ ನಿರ್ವಹಣೆ ಬಗ್ಗೆ ಗಮನವನ್ನು ಕೇಂದ್ರೀಕರಿಸಿರತಕ್ಕದ್ದು ಮತ್ತು ನಿಧಿ ಆಧಾರಿತ ಲೆಕ್ಕ ಪದ್ಧತಿ, ಗಣಕೀಕರಣ ಮತ್ತು ವಾಸ್ತವಿಕ ಮತ್ತು ಪಾರದರ್ಶಕ ಬಜೆಟ್ ಪ್ರಕ್ರಿಯೆಗಳಂಥ ಬೆಂಬಲ ಸೇವಾ ವ್ಯವಸ್ಥೆಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

(7) ಮಧ್ಯಮಾವಧಿ ಆರ್ಥಿಕ ಯೋಜನೆಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.

**4. ಹಣಕಾಸು ನಿರ್ವಹಣಾ ತತ್ವಗಳು.-** ಪ್ರತಿಯೊಂದು ಸ್ಥಳೀಯ ನಿಧಿ ಪ್ರಾಧಿಕಾರವು ಈ ಮುಂದಿನ ಹಣಕಾಸು ನಿರ್ವಹಣಾ ತತ್ವಗಳ ಮೂಲಕ ಮಾರ್ಗದರ್ಶನ ಪಡೆಯುವುದು, ಎಂದರೆ:-

(ಎ) ಕಾರ್ಯನೀತಿ ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಎಲ್ಲಾ ಹಂತಗಳಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು;

(ಬಿ) ಕಾರ್ಯನಿರ್ವಹಣೆಗೆ ಸಂಬಂಧಿತ ಬಜೆಟ್ ಕಾರ್ಯ ನೀತಿಗಳನ್ನು ಜಾರಿಗೆ ತರುವುದು;

(ಸಿ) ಪರಿಣಾಮಕಾರಿ ಮತ್ತು ಸಮರ್ಥ ನಿರ್ವಹಣೆಯ ಆರ್ಥಿಕ ಮೇಲ್ವಿಚಾರಣಾ ಪದ್ಧತಿಗಳಿಗೆ ಅವಕಾಶ ಕಲ್ಪಿಸುವುದು;

(ಡಿ) ದೃಢಕಾಯದ ಆರ್ಥಿಕ ನಿರ್ವಹಣಾ ತತ್ವಗಳನ್ನು ಜಾರಿಗೆ ತರುವುದು;

(ಇ) ಸ್ಥಳೀಯ ನಿಧಿ ಪ್ರಾಧಿಕಾರದ ಋಣವನ್ನು ವಿವೇಕಯುತ ಮಟ್ಟದಲ್ಲಿ ನಿರ್ವಹಿಸಿಕೊಂಡುಬರುವುದು;

(ಎಫ್) ಖಾತರಿಗಳು ಮತ್ತು ಇತರ ಸಾದಿಲ್ವಾರು ಹೊಣೆಗಾರಿಕೆಗಳನ್ನು, ಅದರಲ್ಲೂ ಆ ಹೊಣೆಗಾರಿಕೆಗಳ ಗುಣಮಟ್ಟ ಮತ್ತು ಮಟ್ಟಕ್ಕೆ ಸಂಬಂಧಿಸಿದಂತೆ ವಿವೇಚನೆಯಿಂದ ನಿರ್ವಹಿಸುವುದು;

(ಜಿ) ಸ್ಥಳೀಯ ನಿಧಿ ಪ್ರಾಧಿಕಾರದ ಕಾರ್ಯನೀತಿ ತೀರ್ಮಾನಗಳು ಅವುಗಳ ಪ್ರಸಕ್ತ ಹಣಕಾಸು ಪರಿಸ್ಥಿತಿ ಮತ್ತು ಮುಂದಿನ ತಲೆಮಾರುಗಳ ಮೇಲೆ ಬೀರುವ ಆರ್ಥಿಕ ಪರಿಣಾಮಗಳ ಬಗ್ಗೆ ಸೂಕ್ತ ಗಮನ ನೀಡುವಂತೆ ನೋಡಿಕೊಳ್ಳುವುದು;

(ಹೆಚ್) ಸಂದಾಯಗಳು ಮತ್ತು ಸ್ವೀಕೃತಿಗಳಿಗಾಗಿ ಪ್ರಾಪ್ತಿ ವ್ಯವಸ್ಥೆಯ ಲೆಕ್ಕ ಪದ್ಧತಿಯನ್ನು ಅನುಸರಿಸುವುದು;

(ಐ) ಸಾಲಗಳನ್ನು ಉತ್ಪಾದನಾ ಉದ್ದೇಶಗಳಿಗಾಗಿ ಮತ್ತು ಬಂಡವಾಳ ಸ್ವತ್ತುಗಳ ಸಂಗ್ರಹಣೆಗಾಗಿ ಉಪಯೋಗಿಸಿಕೊಳ್ಳುವಂತೆ ಹಾಗೂ ಚಾಲ್ತಿ ವೆಚ್ಚಕ್ಕೆ ಹಣ ಒದಗಿಸಲು ವಿನಿಯೋಗಿಸಿಕೊಳ್ಳದಂತೆ ನೋಡಿಕೊಳ್ಳುವುದು;

(ಜೆ) ನಿಧಿಗಳ ಹರಿವಿನಲ್ಲಿ ಸಮಂಜಸ ಪೂರ್ವ ನಿರೀಕ್ಷೆಗೆ ಅವಕಾಶವಿರುವಂತೆ ನೋಡಿಕೊಳ್ಳುವುದು;

(ಕೆ) ದಕ್ಷ ಅರ್ಥ ವ್ಯವಸ್ಥೆ ಮತ್ತು ಪಾಲನಾ ವೆಚ್ಚಗಳಿಗೆ ಸೂಕ್ತ ಗಮನ ನೀಡಿ ತೆರಿಗೆ ಕಾರ್ಯ ನೀತಿಯನ್ನು ಅನುಸರಿಸುವುದು;

(ಎಲ್) ವೆಚ್ಚ ವಸೂಲಿಗೆ ಮತ್ತು ಇಕ್ವಿಟಿಗೆ ಸೂಕ್ತ ಗಮನ ನೀಡಿ ಆರ್ಥಿಕ ನೀತಿಗಳನ್ನು ಅನುಸರಿಸುವುದು;

(ಎಂ) ಆರ್ಥಿಕ ಬೆಳವಣಿಗೆ, ಬಡತನ ನಿವಾರಣೆ ಮತ್ತು ಮಾನವ ಕಲ್ಯಾಣದಲ್ಲಿ ಸುಧಾರಣೆಗೆ ತ್ವರಿತಗತಿಯನ್ನು ನೀಡುವ ವೆಚ್ಚ ಕಾರ್ಯನೀತಿಗಳನ್ನು ಅನುಸರಿಸುವುದು;

(ಎನ್) ಸ್ಥಳೀಯ ನಿಧಿ ಪ್ರಾಧಿಕಾರದ ಭೌತಿಕ ಸ್ವತ್ತುಗಳನ್ನು ಸೂಕ್ತವಾಗಿ ನಿರ್ವಹಿಸುವಂತೆ ನೋಡಿಕೊಳ್ಳುವುದು;

(ಓ) ಆರ್ಥಿಕ ನೀತಿ ನಿರ್ವಹಣೆಯನ್ನು ಮತ್ತು ಸ್ಥಳೀಯ ನಿಧಿ ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಲು ಸಾರ್ವಜನಿಕರಿಗೆ ಅವಕಾಶ ಕೊಡುವುದಕ್ಕಾಗಿ ಸಾಕಷ್ಟು ಮಾಹಿತಿಯನ್ನು ಬಹಿರಂಗಪಡಿಸುವುದು;

(ಪಿ) ಹಣಕ್ಕೆ ಅತ್ಯುತ್ತಮ ಮೌಲ್ಯ ದೊರಕುವ ರೀತಿಯಲ್ಲಿ ಸಂಪನ್ಮೂಲಗಳನ್ನು ಸ್ಥಳೀಯ ನಿಧಿ ಪ್ರಾಧಿಕಾರವು ಉಪಯೋಗಿಸಿಕೊಳ್ಳುವಂತೆ ನೋಡಿಕೊಳ್ಳುವುದು ಮತ್ತು ಸಾರ್ವಜನಿಕ ಸ್ವತ್ತುಗಳನ್ನು ಸಾಧ್ಯವಾದಷ್ಟು ಉತ್ತಮವಾಗಿ ಬಳಸಿಕೊಳ್ಳುವಂತೆ ಸಹ ನೋಡಿಕೊಳ್ಳುವುದು;

(ಕ್ಯೂ) ಸಂಗ್ರಹಿಸಲಾದ ರಾಜಸ್ವದ ಮಟ್ಟಕ್ಕೆ ತಕ್ಕಂತೆ ವೆಚ್ಚದ ನಿರ್ವಹಣೆ ಮಾಡುವುದು;

(ಆರ್) ಸಾಮಾನ್ಯ ಆರ್ಥಿಕ ಮುನ್ನೋಟ ಮತ್ತು ರಾಜಸ್ವ ನಿರೀಕ್ಷೆಗಳಿಗೆ ಸೂಕ್ತ ಗಮನ ನೀಡಿ ವಾಸ್ತವಿಕ ಮತ್ತು ವಸ್ತು ನಿಷ್ಠ ರೀತಿಯಲ್ಲಿ ಬಜೆಟ್ಟನ್ನು ರೂಪಿಸುವುದು

ಹಾಗೂ ವರ್ಷಾವಧಿಯಲ್ಲಿ, ಅದರಲ್ಲಿ ಹೆಚ್ಚು ಬದಲಾವಣೆ ಮಾಡದಂತೆ ನೋಡಿಕೊಳ್ಳುವುದು;

(ಎಸ್) ಬಾಕಿಗಳು ಮತ್ತು ತೆರಿಗೆಗಳನ್ನು ತ್ವರಿತವಾಗಿ ವಸೂಲು ಮಾಡುವಂತೆ ನೋಡಿಕೊಳ್ಳುವುದು;

(ಟಿ) ಚಾಲ್ತಿ ಹೊಣೆಗಾರಿಕೆಗಳನ್ನು ಸಕಾಲದಲ್ಲಿ ತೀರಿಸುವಂತೆ ನೋಡಿಕೊಳ್ಳುವ ಬಗ್ಗೆ ನಿಯಮಿತ ಕಾಲದೊಳಗೆ ಖಚಿತಪಡಿಸಿಕೊಳ್ಳುವುದು;

(ಯು) ಸ್ಥಳೀಯ ನಿಧಿ ಪ್ರಾಧಿಕಾರದಿಂದ ಒದಗಿಸಲಾದ ಸೇವೆಗಳ ವೆಚ್ಚವನ್ನು ಲೆಕ್ಕಹಾಕಲು ಯುಕ್ತ ತಂತ್ರಗಳನ್ನು ಅಳವಡಿಸುವುದು.

5. **ಆರ್ಥಿಕ ಪಾರದರ್ಶಕತೆಗಾಗಿ ಕ್ರಮಗಳು.-** (1) ಸ್ಥಳೀಯ ನಿಧಿ ಪ್ರಾಧಿಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ತನ್ನ ಆರ್ಥಿಕ ಕಾರ್ಯಾಚರಣೆಗಳಲ್ಲಿ ಹೆಚ್ಚಿನ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ವಾರ್ಷಿಕ ಬಜೆಟ್ಟಿನ ತಯಾರಿಕೆಯಲ್ಲಿ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಕನಿಷ್ಠ ಗೌಪ್ಯತೆ ಇರುವಂತೆ ನೋಡಿಕೊಳ್ಳತಕ್ಕದ್ದು. ಈ ಉದ್ದೇಶಕ್ಕಾಗಿ, ಪ್ರತಿಯೊಂದು ಸ್ಥಳೀಯ ನಿಧಿ ಪ್ರಾಧಿಕಾರವು ಬಜೆಟ್‌ನ್ನು ತಯಾರಿಸುವ ಮತ್ತು ಅಂತಿಮಗೊಳಿಸುವ ಸಮಯದಲ್ಲಿ, ಪ್ರತಿವರ್ಷ ನಿಯಮಿಸಬಹುದಾದಂಥ ನಾಗರಿಕ ವೇದಿಕೆಗಳೊಂದಿಗೆ ಚರ್ಚಿಸಲು ಕನಿಷ್ಠ ಎರಡು ಸಭೆಗಳನ್ನಾದರೂ ನಡೆಸತಕ್ಕದ್ದು.

(2) ಸ್ಥಳೀಯ ನಿಧಿ ಪ್ರಾಧಿಕಾರದ ಕಾರ್ಯಾಚರಣೆಗಳನ್ನು ಮತ್ತು ಹಣಕಾಸಿನ ಪರಿಸ್ಥಿತಿಗಳನ್ನು ಪುನರವಲೋಕಿಸಲು, ನಾಗರಿಕರ ವೇದಿಕೆಗಳೊಡನೆ ನಿಯಮಿಸಬಹುದಾದ ಅಂತರಗಳಲ್ಲಿ ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸತಕ್ಕದ್ದು.

(3) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸ್ಥಳೀಯ ನಿಧಿ ಪ್ರಾಧಿಕಾರವು ವಾರ್ಷಿಕ ಬಜೆಟ್ಟಿನ ಮಂಡನೆಯ ಸಮಯದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿನ ಒಂದು ಹೇಳಿಕೆಯಲ್ಲಿ ಈ ಮುಂದಿನವುಗಳನ್ನು ಬಹಿರಂಗಪಡಿಸತಕ್ಕದ್ದು,-

(ಎ) ಆರ್ಥಿಕ ಸೂಚಿಗಳ ಲೆಕ್ಕ ಇಡುವಲ್ಲಿ ಪರಿಣಾಮಬೀರುವ ಅಥವಾ ಪರಿಣಾಮ ಬೀರುವ ಸಂಭವವಿರುವ - ಲೆಕ್ಕದ ನಿರ್ವಹಣೆ ಗುಣಮಟ್ಟಗಳು, ಕಾರ್ಯನೀತಿಗಳು ಮತ್ತು ಪದ್ಧತಿಗಳಲ್ಲಿನ ಗಮನಾರ್ಹ ಬದಲಾವಣೆಗಳು;

(ಬಿ) ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೆ ಸುಸಂಗತವಾಗಿ, ಖಾತರಿಗಳ ಮೂಲಕ ಸೃಜಿಸಲಾದ ಸಾದಿಲ್ವಾರು ದಾಯಿತ್ವಗಳು ಮತ್ತು ಮರು ಸಂದಾಯದ ಹೊಣೆಗಾರಿಕೆ ಸ್ಥಳೀಯ ನಿಧಿ ಪ್ರಾಧಿಕಾರದ್ದಾಗಿದ್ದು ಹೊರಗಿನ ಏಜೆನ್ಸಿಗಳ ಮೂಲಕ ಕಾಮಗಾರಿಗಳ ನಿರ್ವಹಣೆಯಿಂದ ಉಂಟಾಗುವ ವಾಸ್ತವಿಕ ದಾಯಿತ್ವಗಳು.

(4) ರಾಜ್ಯ ಸರ್ಕಾರವು ಅಂಥ ಸಾದಿಲ್ವಾರು ದಾಯಿತ್ವವನ್ನು ಕುರಿತು ಸಂಬಂಧಪಟ್ಟ ಸ್ಥಳೀಯ ನಿಧಿ ಪ್ರಾಧಿಕಾರಕ್ಕೆ, ಅದು ಈ ಬಗ್ಗೆ ತನ್ನ ಬಜೆಟ್ಟಿನಲ್ಲಿ ಸಾಕಷ್ಟು ಅವಕಾಶ ಮಾಡಿಕೊಳ್ಳಲು ಸಾಧ್ಯವಾಗುವಂತೆ, ತಿಳಿಸುವಂತೆ ನೋಡಿಕೊಳ್ಳತಕ್ಕದ್ದು.

6. **ಈ ಅಧಿನಿಯಮದ ಪಾಲನೆಯನ್ನು ಜಾರಿಗೊಳಿಸುವುದಕ್ಕೆ ಕ್ರಮಗಳು.-** (1) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಪಾಲನೆಯನ್ನು ಜಾರಿಗೊಳಿಸತಕ್ಕದ್ದು.

(2) ರಾಜ್ಯ ಲೆಕ್ಕ ಪತ್ರಗಳ ಇಲಾಖೆಯು ಪಾಲನೆ ಮಾಡುತ್ತಿರುವುದರ ಮೇಲ್ವಿಚಾರಣೆ ಮಾಡಬಹುದು ಮತ್ತು ನಿಯತಕಾಲಿಕ ಪುನರ್ ಪರಿಶೀಲನಾ ವರದಿಗಳನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಸೂಕ್ತ ಕಾರ್ಯತಂತ್ರವನ್ನು ಅಧಿಸೂಚಿಸಬಹುದು.

(3) ರಾಜ್ಯ ಸರ್ಕಾರವು, ಬಜೆಟ್‌ಗೆ ಸಂಬಂಧಪಟ್ಟ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಸ್ಥಳೀಯ ನಿಧಿ ಪ್ರಾಧಿಕಾರವು ಪಾಲಿಸುವಂತೆ ಮತ್ತು ತಯಾರಿಸಲಾದ ಬಜೆಟ್, ಈಗಾಗಲೇ ಅನುಮೋದಿತವಾದ ಮಧ್ಯಮಾವಧಿ ಆರ್ಥಿಕ ಯೋಜನೆಗೆ ಅನುಸಾರವಾಗಿರುವಂತೆ ಮತ್ತು ಮಾರ್ಪಾಟುಗಳೇನಾದರೂ ಇದ್ದಲ್ಲಿ ಅವುಗಳನ್ನು ವಿವರಿಸಿರುವಂತೆ ನೋಡಿಕೊಳ್ಳತಕ್ಕದ್ದು.

(4) ಸ್ಥಳೀಯ ನಿಧಿ ಪ್ರಾಧಿಕಾರವು, ಬಜೆಟ್ ವ್ಯತ್ಯಾಸದ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು, ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ನಮೂನೆಯಲ್ಲಿ ನಿಯಂತ್ರಣ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(5) ಸ್ಥಳೀಯ ನಿಧಿ ಪ್ರಾಧಿಕಾರವು, ನಿಯಮಿಸಬಹುದಾದಂತೆ ಲೆಕ್ಕಗಳ ಸ್ವೀಕೃತಿಗಳು ಮತ್ತು ಸಂದಾಯಗಳು, ಲೆಕ್ಕಗಳ ಆದಾಯ ಮತ್ತು ವೆಚ್ಚ ಮತ್ತು ಶಿಲ್ಕು ವಿವರಣಾ ಪಟ್ಟಿಯನ್ನು ತಯಾರಿಸತಕ್ಕದ್ದು.

(6) ಸ್ಥಳೀಯ ನಿಧಿ ಪ್ರಾಧಿಕಾರದ ಲೆಕ್ಕ ಪತ್ರಗಳ ಲೆಕ್ಕಪತ್ರಪರಿಶೋಧನೆಯನ್ನು ಸಂಬಂಧಪಟ್ಟ ಅಧಿನಿಯಮಗಳ ಮತ್ತು ನಿಯಮಗಳ ಅಡಿಯಲ್ಲಿ ಮತ್ತು ಅದರಡಿಯಲ್ಲಿ ಹೊರಡಿಸಿದ ಆದೇಶಗಳಂತೆ ನೇಮಕಗೊಂಡ ಲೆಕ್ಕ ಪರಿಶೋಧಕನಿಂದ ನಡೆಸತಕ್ಕದ್ದು ಮತ್ತು ವರದಿಯನ್ನು ಗೊತ್ತುಪಡಿಸಿದ ಸಮಯದೊಳಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(7) ಸ್ಥಳೀಯ ನಿಧಿ ಪ್ರಾಧಿಕಾರವು ಲೆಕ್ಕಪರಿಶೋಧನಾ ವರದಿಯ ಮೇಲೆ ಕಟ್ಟುನಿಟ್ಟಾಗಿ ಅನುಪಾಲನಾ ಕ್ರಮ ಕೈಗೊಳ್ಳುವಂತೆ ನೋಡಿಕೊಳ್ಳಲು ನಿಯಂತ್ರಣ ಪ್ರಾಧಿಕಾರಗಳು ಜವಾಬ್ದಾರಿಯಾಗಿರತಕ್ಕದ್ದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಯವು ಮಂದಗತಿಯಲ್ಲಿ ಆಗುತ್ತದೆ ಎಂಬುದು ಗಮನಕ್ಕೆ ಬಂದಲ್ಲಿ, ಅಂಥ ತಪ್ಪಿತಸ್ಥ ಸ್ಥಳೀಯ ನಿಧಿ ಪ್ರಾಧಿಕಾರದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(8) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ, ಅಧಿಕಾರಗಳನ್ನು ಹೊಂದಿರುವ ಮತ್ತು ಅಂಥ ಅಧಿಕಾರಿಗಳನ್ನೊಳಗೊಂಡ ಒಂದು ಸ್ಥಳೀಯ ನಿಧಿ ಲೆಕ್ಕಪರಿಶೋಧನೆ ಮೇಲ್ವಿಚಾರಣೆ ಪ್ರಾಧಿಕಾರವನ್ನು ರಚಿಸಬಹುದು. ಸ್ಥಳೀಯ ನಿಧಿ ಲೆಕ್ಕಪರಿಶೋಧನೆ ಮೇಲ್ವಿಚಾರಣೆ ಪ್ರಾಧಿಕಾರವು, ನಿಯಮಿಸಬಹುದಾದಂತೆ, ಸ್ಥಳೀಯ ನಿಧಿ ಪ್ರಾಧಿಕಾರವು ಲೆಕ್ಕ ಪರಿಶೋಧನಾ ವರದಿಯ ಪಾಲನೆ ಮಾಡಿರುವ ಬಗ್ಗೆ ನಿಯತಕಾಲಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(9) ಆರ್ಥಿಕ ವರ್ಷದ ಕೊನೆಯಿಂದ ಆರು ತಿಂಗಳುಗಳೊಳಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಲೆಕ್ಕಗಳನ್ನು ಒದಗಿಸಲು ವಿಫಲವಾದಲ್ಲಿ, ಅಂಥ ಯಾವುದೇ ಸ್ಥಳೀಯ ನಿಧಿ ಪ್ರಾಧಿಕಾರಕ್ಕೆ ನಿಧಿಗಳನ್ನು ಬಿಡುಗಡೆ ಮಾಡುವುದನ್ನು ರಾಜ್ಯ ಸರ್ಕಾರವು ತಡೆಹಿಡಿಯಬಹುದು.

(10) ಸ್ಥಳೀಯ ನಿಧಿ ಪ್ರಾಧಿಕಾರವು, ಸೂಕ್ತ ಆಂತರಿಕ ಲೆಕ್ಕ ಪರಿಶೋಧನೆ ಕ್ರಮಗಳನ್ನು ಮತ್ತು ಸೂಕ್ತ ತಂತ್ರಜ್ಞಾನವನ್ನು ಬಳಸಿ ಸಮರ್ಥ ಗಣಕೀಕರಣ ಕಾರ್ಯಕ್ರಮಗಳನ್ನು ಪ್ರಾರಂಭಿಸತಕ್ಕದ್ದು ಹಾಗೂ ಶಕ್ತಗೊಳಿಸತಕ್ಕದ್ದು.

**7. ಹಣಕಾಸು ಲೆಕ್ಕ ಮತ್ತು ವಾರ್ಷಿಕ ವರದಿಯ ಪ್ರಕಟಣೆ.-** (1) ಪ್ರತಿಯೊಂದು ಸ್ಥಳೀಯ ನಿಧಿ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು, ವಾರ್ಷಿಕ ಬಜೆಟ್ಟನ್ನು (ವಾರ್ಷಿಕ ಲೆಕ್ಕಪತ್ರಗಳು ಮತ್ತು ವಾರ್ಷಿಕ ವರದಿಗಳನ್ನು ಪ್ರಮಾಣೀಕೃತ ವಾರ್ಷಿಕ ಲೆಕ್ಕ ಪತ್ರಗಳೊಂದಿಗೆ) ಪ್ರಕಟಿಸತಕ್ಕದ್ದು.

(2) ಪ್ರತಿಯೊಂದು ಸ್ಥಳೀಯ ನಿಧಿ ಪ್ರಾಧಿಕಾರವು, ಆರ್ಥಿಕ ವರ್ಷದ ಕೊನೆಯ ಆರು ತಿಂಗಳೊಳಗೆ, ತನ್ನ ವಾರ್ಷಿಕ ವರದಿಯನ್ನು ಪ್ರಮಾಣೀಕೃತ ವಾರ್ಷಿಕ ಲೆಕ್ಕಪತ್ರಗಳ ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು, ಅವುಗಳನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಪ್ರಮಾಣೀಕೃತ ವಾರ್ಷಿಕ ಲೆಕ್ಕ ಪತ್ರಗಳೊಂದಿಗೆ

ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**8. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೇ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನದ ಅಥವಾ ಅದರ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಪ್ರತಿಕೂಲ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

**9. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕ್ರಮಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಯಾವುದೇ ಸ್ಥಳೀಯ ನಿಧಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ನಿಧಿ ಪ್ರಾಧಿಕಾರದ ನಿರ್ದೇಶನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**10. ಇತರ ಕಾನೂನುಗಳ ಅನ್ವಯ.-** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳಿಗೆ, ಈ ಅಧಿನಿಯಮದ ಉಪಬಂಧಗಳೊಂದಿಗೆ ಅವು ಅಸಂಗತವಾಗಿರದಷ್ಟು ಮಟ್ಟಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**11. ತೊಂದರೆಗಳ ನಿವಾರಣೆಗೆ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಆ ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಏನನ್ನಾದರೂ ಮಾಡಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.